**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ. ಸಿ. 95/2019**

| | | |
|---|---|---|
| ಸಾಕ್ಷಿಯ ಹೆಸರುಃ | ವೆಂಕಟೇಶ | ಫ್ರಾಸಾಃ 4 |
| ತಂದೆ ಹೆಸರುಃ | ಮರೀಗೌಡ | ಚಾಸಾಃ 10 |
| ವಯಸ್ಸುಃ | 40 ವರ್ಷ | ಪ್ರಮಾಣೀಕರಿಸಿದ<br>ದಿಃ 17.03.2026. |
| ಉದ್ಯೋಗಃ | ಅಬಕಾರಿ ನಿರೀಕ್ಷಕರು,<br>ಪಿರಿಯಾಪಟ್ಟಣ ವಲಯ | |
| ವಾಸಸ್ಥಳಃ | ಪಿರಿಯಾಪಟ್ಟಣ | |

**ಮುಖ್ಯ ವಿಚಾರಣೆಃ** ಮಾನ್ಯ ಸಸಅ **ರಿಂದಃ**

ನಾನು ದಿಃ 23/10/2016 ರಿಂದ 06/06/2019 ರವರೆಗೆ ಅಬಕಾರಿ ಉಪನಿರೀಕ್ಷಕನಾಗಿ, ಅಬಕಾರಿ ನಿರೀಕ್ಷಕರ ಕಚೇರಿ, ಪಿರಿಯಾಪಟ್ಟಣ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 17/10/2017 ರಂದು ಸಂಜೆ 6.00 ಗಂಟೆ ಸಮಯಕ್ಕೆ ನಾನು, ಚಾಸಾ-4, ಚಾಸಾ-3, ಚಾಸಾ-5 ರವರೊಂದಿಗೆ ಇಲಾಖಾ ವಾಹನದಲ್ಲಿ ಕೊಪ್ಪ ಗ್ರಾಮದ ಅವರ್ತಿ ಸರ್ಕಲ್ ನಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ ಕೊಪ್ಪ ಗ್ರಾಮದ ಕಡೆಯಿಂದ ಒಂದು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಆಸಾಮಿ ನಮ್ಮನ್ನು ನೋಡಿ ಗಾಬರಿಗೊಂಡಂತೆ ಕಂಡುಬಂದಿತು. ನಾವು ಸದರಿ ವಾಹನವನ್ನು ತಡೆದು ನಿಲ್ಲಿಸಿ ವಾಹನ ತಪಾಸಣೆ ಮಾಡಲು ದಾರಿಹೋಕರನ್ನು ಸಾಕ್ಷಿದಾರರನ್ನಾಗಲು ಕೇಳಲಾಗಿ ಚಾಸಾ-1 ಮತ್ತು 2 ರವರು ಒಪ್ಪಿ ಮುಂದೆ ಬಂದಿರುತ್ತಾರೆ. ನಂತರ ವಾಹನವನ್ನು ಶೋಧಿಸಲು ಮಾನ್ಯ ಘನ

ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆಯಲ ಕಾಲಾವಕಾಶ ಇಲ್ಲದ ಕಾರಣ ಅಧಿಕಾರಿಯವರು ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ, ಸಾಕ್ಷಿದಾರರ ಸಹಿ ಪಡೆದು, ಸಿಬ್ಬಂದಿಯವರು ಮತ್ತು ಸಾಕ್ಷಿದಾರರು ಪರಸ್ಪರ ಅಂಗಶೋಧಿಸಿಕೊಂಡು, ವಾಹವನನ್ನು ಪರಿಶೀಲಿಸಿದಾಗ ಅದರ ಪೆಟ್ರೋಲ್ ಟ್ಯಾಂಕ್ ಮೇಲೆ ಪ್ಲಾಸ್ಟಿಕ್ ಚೀಲದಲ್ಲಿ 180 ಎಂ.ಎಲ್.ನ 3 ಒಲ್ಡ್ ಟಾವೆರಿನ್ ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳು, 180 ಎಂ.ಎಲ್.ನ 3 ಕೋಡೇಸ್ XXX ರಮ್ ನ ಟೆಟ್ರಾ ಪ್ಯಾಕೇಟುಗಳು, 180 ಎಂ.ಎಲ್.ನ 3, 8 ಪಿಎಂ ಟೆಟ್ರಾ ಪ್ಯಾಕೇಟ್‌ಗಳು, 90 ಎಂ.ಎಲ್.ನ 3 ಕೋಡೇಸ್ ರಮ್ ನ ಟೆಟ್ರಾ ಪ್ಯಾಕೇಟ್‌ಗಳು ಮತ್ತು 90 ಎಂ.ಎಲ್.ನ 10 ಒರಿಜಿನಲ್ ಟಾವೆರಿನ್ ನ ಟೆಟ್ರಾ ಪ್ಯಾಕೇಟ್ ಗಳು ಇರುವುದು ಕಂಡುಬಂದಿರುತ್ತವೆ. ಈ ಬಗ್ಗೆ ಆಸಾಮಿಯನ್ನು ಪ್ರಶ್ನಿಸಿದಾಗ ಯಾರು ಕೊಟ್ಟರು, ಎಲ್ಲಿಂದ ತಂದಿರಿ, ಪರವಾನಿಗೆ ಇದೆಯೇ ಎಂದು ಕೇಳಿದಾಗ ಇಲ್ಲವೆಂದು ತಿಳಿಸಿರುತ್ತಾರೆ. ಸದರಿ ಮದ್ಯವನ್ನು ಕುಶಲಾನಗರದ ಕದಂಬ ವೈನ್ಸ್‌ನಿಂದ ತಂದಿರುವುದಾಗಿ, ಕೂಲಿ ಕಾರ್ಮಿಕರಿಗೆ ನೀಡಲು ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ. ನಂತರ ಅಧಿಕಾರಿಗಳು ಈ ರೀತಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡುವುದು ಕರ್ನಾಟಕ ಅಬಕಾರಿ ಕಾಯಿದೆ ವಿರುದ್ಧ ಎಂದು ತಿಳಿಸಿರುತ್ತಾರೆ. ಆತನ ಹೆಸರು ವಿಳಾಸ ಕೇಳಿಕೊಂಡೆವು. ವಾಹನವು ಕಪ್ಪು ಮತ್ತು ಬಿಳಿ ಬಣ್ಣದ ಹೀರೋಹೊಂಡಾ, ಕೆಎ-09-ಇಕೆ-2234 ನಂಬರಿನ ವಾಹನವಾಗಿರುತ್ತದೆ. ಆಸಾಮಿಯನ್ನು ಇಲಾಖಾ ವಶಕ್ಕೆ ಪಡೆದು, ಎಲ್ಲಾ ಮಾಲುಗಳನ್ನು ವಶಪಡಿಸಿಕೊಳ್ಳಲಾಯಿತು. ವಶಪಡಿಸಿಕೊಂಡ ಎಲ್ಲಾ ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯಿನಿಕ ಪರೀಕೆಗಾಗಿ ಮಾದರಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ, ಅರಗಿನ ಸಹಾಯದಿಂದ 298 ಇಲಾಖಾ ಸೀಲನ್ನು ಹಾಕಿರುತ್ತೇವೆ. ಸದರಿ ಮದ್ಯದ ಮೇಲೆ ಸಣ್ಣ ಚೀಟಿಗಳಲ್ಲಿ ವಿವರ ಬರೆದು ಪಂಚರ ಸಹಿ ಪಡೆದು ಅವುಗಳ ಮೇಲೆ ಅಂಟಿಸಲಾಯಿತು. ಈ ಸಂಬಂಧ ಸ್ಥಳದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ, ಮಹಜರ್ ನ್ನು ಸಂಜೆ 6.00 ರಿಂದ 7.00 ಗಂಟೆಯವರೆಗೆ ವಾಹನದ ಹೆಡ್ ಲೈಟ್ ಸಹಾಯದಿಂದ ನನ್ನ ಉಕ್ತ ಲೇಖನದಂತೆ ಚಾಸಾ-3 ರವರು

ಬರೆದಿರುತ್ತಾರೆ. ನಂತರ ಆರೋಪಿತ ಹಾಗೂ ಮಾಲುಗಳನ್ನು ಠಾಣೆಗೆ ತಂದು ಆರೋಪಿತನ ವಿರುದ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ಸಾಕ್ಷಿದಾರರ ಹೇಳಿಕೆ ಪಡೆದಿರುತ್ತೇನೆ. ನಂತರ ಆರೋಪಿತ ನನ್ನು ವೈಧ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

3. ದಿಃ 19.10.2017 ರಂದು ಚಾಸಾ-11 ರವರಿಗೆ ಮುಂದಿನ ತನಿಖೆಗಾಗಿ ಕಡತ ಹಾಗೂ ಮು.ಮಾಲನ್ನು ಹಸ್ತಾಂತರಿಸಿರುತ್ತೇನೆ.

4. ಸಾಕ್ಷಿಯು ನಿಪಿ–1 ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–2 ಮಾಲುಪಟ್ಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–3 ಮಾದರಿ ಸೀಲಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.3(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–4 ಶೊಧನಾ ಸಮುಚಿತ ಆಧಾರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.4(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.8** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.8(ಎ)** ಎಂದು ಗುರುತಿಸಲಾಯಿತು.

4. ಆ ದಿನ ವಶಪಡಿಸಿಕೊಂಡ ಮಾಲುಗಳು ಈಗ ನ್ಯಾಯಾಲಯದ ಮುಂದಿರುತ್ತವೆ. ಅವುಗಳ ಪೈಕಿ ಮಧ್ಯವನ್ನು ಈಗಾಗಲೇ **ಮು.ಮಾ.1** ಎಂದು, ಚೀಲವನ್ನು **ಮು.ಮಾ.2** ಎಂದು ಗುರುತಿಸಲಾಗಿದೆ. ಆರೋಪಿತ ಈ ದಿನ ಗೈರು ಹಾಜರಿದ್ದು ಆತನ ಗುರುತಿನ ಬಗ್ಗೆ ಆರೋಪಿತ ಪರ ವಕೀಲರು ತಕರಾರು ಮಾಡಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ಆರ್.ವಿ ವಕೀಲರಿಂದಃ**

5. ಆ ದಿನ ನಾವು ಚಿಟ್ಟೇನಹಳ್ಳಿ, ಚೌಡೇನಹಳ್ಳಿ, ಹುಣಸವಾಡಿ, ಬೈಲಕುಪ್ಪೆ ಮತ್ತು ಕೊಪ್ಪದಲ್ಲಿ ಗಸ್ತು ಮಾಡಿದ್ದೆವು. ಆ ದಿನ ಒಟ್ಟು 12 ವಾಹನಗಳನ್ನು ತಪಾಸಣೆ ಮಾಡಿದ್ದೆವು. ನಮ್ಮ ಪುಸ್ತಕದಲ್ಲಿ ಯಾವ ಯಾವ ವಾಹನಗಳನ್ನು ಮತ್ತು ಯಾವ ಸಮಯಕ್ಕೆ ಪರಿಶೀಲಿಸಿದ್ದೆವು ಎಂದು ನಮೂದಿಸಿದ್ದೇವೆ. ಸದರಿ ಪುಸ್ತಕವನ್ನು ತನಿಖಾಧಿಕಾರಿ ಹಾಜರುಪಡಿಸಬೇಕು. ಸ್ಥಳದ ಮಾಹಿತಿ ಮತ್ತು ಚಕ್ಕುಬಂದಿ ನನಗೆ ಖುದ್ದಾಗಿ ತಿಳಿದಿದೆ. ಘಟನಾ ಸ್ಥಳ ಜನನಿಬಿಡ ಸ್ಥಳ ಎಂದರೆ ಸರಿ. ಸದರಿ ಸ್ಥಳದಲ್ಲಿ ಅಂಗಡಿಗಳು ಇವೆ, ವಾಸದ ಮನೆಗಳು ಇಲ್ಲ. ಆರೋಪಿತನನ್ನು ಹಿಡಿದುಕೊಂಡಾಗ ಸ್ಥಳದಲ್ಲಿ ನಿಖರವಾಗಿ ಎಷ್ಟು ಜನ ಇದ್ದರು ಎಂದು ಹೇಳಲಾಗುವುದಿಲ್ಲ. ಸ್ಥಳದಲ್ಲಿ 12 ನೇ ವಾಹನವನ್ನು ತಡೆದು ನಿಲ್ಲಿಸಿದ್ದೆವು, ಅದು ಆರೋಪಿತನದ್ದಾಗಿತ್ತು. ಸ್ಥಳದಲ್ಲಿ ಆರೋಪಿತನ ವಾಹನವನ್ನು ಮಾತ್ರ ತಪಾಸಿಸಿರುತ್ತೇವೆ. ಪಂಚರು ಸ್ಥಳೀಕರಲ್ಲ. ಆ ಸ್ಥಳದಲ್ಲಿ ಸ್ಥಳೀಕರನ್ನು ಪಂಚರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅದು ಸಾರ್ವಜನಿಕ ಸ್ಥಳ ಯಾರನ್ನಾದರೂ ಪಂಚರನ್ನಾಗಿ ಮಾಡಬಹುದು ಎಂದು ನುಡಿಯುತ್ತಾರೆ. ಪಂಚರಿಗೆ ಲಿಖಿತ ನೋಟೀಸು ನೀಡಿಲ್ಲ. ಆರೋಪಿತನನ್ನು ನಾನೇ ಮೊದಲು ನೋಡಿ, ನಾನೇ ಅಡ್ಡ ಹಾಕಿ, ವಿಚಾರಿಸಿರುತ್ತೇನೆ. ವಾಹನದ ಸಂಖ್ಯೆಯನ್ನು ಆರೋಪಿತನನ್ನು ಹಿಡಿದುಕೊಂಡ ಮೇಲೆ ಪರಿಶೀಲಿಸಿರುತ್ತೇವೆ. ಸ್ಥಳದಲ್ಲಿ ವಾಹನದ ಮಾಲೀಕರು ಯಾರೆಂದು ತಿಳಿದುಕೊಂಡಿಲ್ಲ. ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಚೀಲ ಇತ್ತು. ಪ್ಲಾಸ್ಟಿಕ್ ಚೀಲದ ಮೇಲೆ ಯಾವ ಅಕ್ಷರ ಬರೆದಿತ್ತು ಎಂದು ಹೇಳಲಾಗುವುದಿಲ್ಲ. ಚೀಟಿಗಳನ್ನು ಸ್ಥಳದಲ್ಲೇ ತಯಾರಿಸಿದ್ದು, ಚಾಸಾ–3 ರವರು ಬರೆದಿರುತ್ತಾರೆ. ಮದ್ಯದ ಬ್ಯಾಚ್ ಸಂಖ್ಯೆ ಕಂಪನಿಯ ಹೆಸರು ಮಹಜರ್ ನಲ್ಲಿ ಬರೆದಿದೆ. ನಾವು ಯಾವುದೇ ವಾಹನವನ್ನು ಕೊಪ್ಪ ಸರ್ಕಲ್ ನಲ್ಲಿ ತಪಾಸಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಪೂರ್ವ ಆರೋಪಿತನ ಬಗ್ಗೆ ನಮಗೆ ಖುದ್ದು ಮಾಹಿತಿ ಇಲ್ಲ. ಆರೋಪಿತ ಯಾವುದೇ ಮಾಲನ್ನು ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಮುದ್ದೇಮಾಲುಗಳನ್ನು ಮತ್ತು ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಘಟನಾ ಸಮಯ ಚುನಾವಣಾ ಸಮಯ ಎಂದರೆ ನನಗೆ ನೆನಪಿಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಠಾಣೆಯಲ್ಲಿ ಪಡೆದಿರುತ್ತೇನೆ. ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ಸಮಕ್ಷಮ ನಾನೇ ಹೇಳಿಕೆ ದಾಖಲಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.